ಕಥೆ

# ಅವು ಅಂಗೇ



**ರವಿಕುಮಾರ್ ನೀಹ**

ಕಲೆ: ವಿಶ್ವನಾಥ್ ಎ.ಎಸ್.

ಈ ಶಬ್ದ ಕೇಳಿದಾಗಿ ನಿಂದ ಕಾಂತನ ಮನಸ್ಸಿಗೆ ಗಾಸಿಯಾಗಿತ್ತು.

ಹೌದು, ಕಾಂತ ಚಿಕ್ಕವಯಸ್ಸಿನಿಂದ ಇಂಥವುಗಳನ್ನು ಕೇಳಿ ಕೇಳಿ ಅವಮಾನದ ಲೋಕದೊಳಗೆ ದೂರೆಯಾಗಿದ್ದ. ಈ ಅವಮಾನ ತಲತಲಾಂತರದಿಂದ ಬಳುವಳ್ಕೆಯಾಗಿ ಬಂದ ಆಸ್ತಿಯಾಗಿತ್ತು. ಸಣ್ಣುಡುಗನಾಗಿ ಇದ್ದಾಗಿನಿಂದಲೂ ಇದನ್ನೆಲ್ಲಾ ಸಹಿಸಿಕೊಳ್ಳುವುದನ್ನು, ಊರೊಟ್ಟಿನ ಸಂಬಂಧಗಳೇ ತರಬೇತಿ ನೀಡಿ ರೂಢಿಸಿದ್ದವು. ಊರ್‍ಗಾಗಿ ಎಲ್ಲ ಅವಮಾನಗಳು ಹೊಟ್ಟೆ ಸೇರ್ತಿದ್ವು. ಹೊಟ್ಟಗಾಕ್ಕೋಳೋದು ತಾತ ಮುತ್ತಾತರು ಹೇಳಿಕೊಟ್ಟ ವಿದ್ಯೆಯಾಗಿತ್ತು. ತನ್ನೂರಿನಲ್ಲಿ ತಾನು ಪಟ್ಟಪಾಡು ಸಂಕಟಗಳಿಗೆ ಬೇಸತ್ತು ಓದುವುದಕ್ಕಾದರೂ ಹತ್ತ್ರದ ಪಟ್ಟಣಕ್ಕೆ ಹೋಗಲು ನಿರ್ಧರಿಸಿದ್ದ. ಏನೂ ಅರಿಯದ ಅವ್ವ ಅಪ್ಪ ತಕರಾರೇ ತೆಗೆಯಲಿಲ್ಲ. ಬಿಟ್ಣುಪುರಟೌನ್‌ಗೆ ಹೋಗುವವರೆಗೂ ಇಂತಹ ಬೈಗುಳಗಳೇ ಕಾಂತನ ಜೀವನದ ಭಾಗವಾಗಿದ್ದವು. ಹುಟ್ಟೂರನ್ನು ಬಿಟ್ಟು ಈಗ ಎಷ್ಟೋ ವರ್ಷಗಳಾಗಿವೆ. ಮತ್ತೆ ಊರಿನ ಕಡೆ ಹೋಗುವ ಮನಸಾಗಲಿಲ್ಲ. ಅಪ್ಪ ಅಮ್ಮ ಇರುವರೆಗೂ ಊರಿಗೆ ಹೋಗುತ್ತಿದ್ದವನು ಅವರು ಹೋದಮೇಲೆ ಊರನ್ನೇ ಮರೆತುಬಿಟ್ಟಿದ್ದ. ಅಲ್ಲಿ ಅವನದು, ಅಪ್ಪನದು ಅಂತ ಏನೂ ಇರಲಿಲ್ಲ. ಪಟ್ಟಣದಲ್ಲೇ ಓದಿ ಮದುವೆಯಾಗಿ ಅಲ್ಲೆ ಸೆಟ್ಲಾಗಿದ್ದ. ಜಾತಿಯ ಕಾರಣಕ್ಕೆ ದುಬಾರಿ ಹಣ ಹೊಂದಿಸಲಾಗದೆ ಪಟ್ಟಣದ ವರಚ್ಗೆ ಸೈಟ್ ತಗಂಡು ಚಿಕ್ಕದೊಂದು ಮನೆ ಕಟ್ಕಂಡು ಹೆಂಡ್ತಿ ಎರಡು ಮಕ್ಕಳೊಂದಿಗೆ ಜೀವ್ನ ನಡೆಸುತ್ತಿದ್ದ.

ಈಗ ಜೀವನದ ಕೊನೆಯ ಹೊತ್ತಿನಲ್ಲಿ ಮೊನ್ನೆಯಷ್ಟೇ ಕೇಳಿದ 'ಅವು ಅಂಗೇ' ಅನ್ನೋ ಪದವಂತೂ ಕಾಂತನನ್ನು ಇನ್ನಿಲ್ಲದಂತೆ ದಣಿಸಿಬಿಟ್ಟಿತ್ತು. 'ಅವ'ನಿಂದ ಈ ಮಾತು ಕೇಳಿಸಿಕೊಂಡು ಹಾಗೇ ಬಂದು ಬಿಟ್ಟೆನಲ್ಲ, ಎಂತಹ ಹೇಡಿ ಅನಿಸಿತು. ಅವನಿಗೆ ಇನ್ನೂ ಸರಿಯಾಗಿ ಶಾಸ್ತಿ ಮಾಡಬೇಕಿತ್ತು. ಅಂಗಂದ್ರೆ ಏನೂ ಎಂಬುದನ್ನು ಅರ್ಥಮಾಡಿಸಬೇಕಿತ್ತು ಎಂದು ಸಿಟ್ಟು ಏರುತ್ತಾ ಹೋಯಿತು. ಆ ಪದ ಕೇಳಿಸಿಕೊಂಡಾಗಿನ ಸಂಕಟ, ಅವ್ನು ಹೇಳುವಾಗ ತೋರಿಸಿದ ಜಾತಿಯ ಧಿಮಾಕು, ಏರಿಳಿತ, ಉಡಾಫೆ, ಮೇಲರಿಮೆಯ ದನಿ ಎಲ್ಲ ಇಣುಕಿದ್ದವು. ಕೇವಲ ಎರಡೇ ಶಬ್ದಗಳು ಕಾಂತನನ್ನು ಅಲ್ಲೋಲಕಲ್ಲೋಲಗೊಳಿಸಿದವು.

ಕದ್ರ ಅಲಿಯಾಸ್ ಕಾಂತ ದೊಡ್ಡೊಸಳ್ಳಿಯ ಹತ್ತಿಪ್ಪತ್ತು ಮನೆಗಳಿದ್ದ ಕೇರಿಯಿಂದ ಬಂದವ. ದೊಡ್ಡೊಸಳ್ಳಿ ಕುಲೊಂಭತ್ತು ಜಾತಿಗಳಿದ್ದ ಊರು. ಅದರಲ್ಲಿ ಹತ್ತಿಪ್ಪತ್ತು ಮನೆಯಷ್ಟೇ ಇವರವು. ಊರನ್ನು ಕ್ಲೀನ್ ಮಾಡುವುದು ಇವರಿಗೆ ವಂಶಪಾರಂಪರ್ಯದಿಂದ ಬಂದ ಕುಲಕಸುಬಾಗಿತ್ತು. ವಯಸ್ಸಾದ ಅಪ್ಪ ಮಾರಯ್ಯ ಇದನ್ನೆಲ್ಲಾ ನಿಭಾಯಿಸ್ತಿದ್ದ. ಸಣ್ಣ ವಯ್ಸಿನಿಂದ್ಲೂ ಕದ್ರನಿಗೆ ಇದು ಇಷ್ಟವಾಗುತ್ತಿರಲಿಲ್ಲ. ಅದೇ ಹೊತ್ನಾಗೆ ಆ ಊರ್‍ನಲ್ಲಿ ಆಗತಾನೇ ಶುರುವಾಗಿದ್ದ ಇಸ್ಕೂಲ್ಗೆ ಯಂಕ್ಟಪ್ಪ ಅನ್ನೋರು ಮೇಷ್ಟ್ರಾಗಿ ಬಂದಿದ್ರು. ಯಂಕ್ಟಪ್ಪ ಶಿಸ್ತಿನ ವ್ಯಕ್ತಿ. ಅಕ್ಷರ ಕಲಿಸೋದು, ಉಲ್ಟಾ ಮಗ್ಗಿ ಹೇಳ್ಸೋದು ಮಾಡ್ತಿದ್ರು. ಏನಾದ್ರೂ ತಪ್ಪು ಹೇಳುದ್ರೆ ಗೆಣ್ಣು ಊದ್ಕಣಂಗೆ ಹೊಡಿತಿದ್ರು. ಈ ಭಯುಕ್ಕೆ ಕದ್ರ ಅಕ್ಷರ ಕಲಿತ. ಮೊದಲು ಮೇಷ್ಟ್ರು ಭಯಕ್ಕೆ ಕಲುತ್ರೆ,